ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮಹಾನಗರಪಾಲಿಕೆಯ ಕಮಿಷನರ್‌ರವರು ಇಲ್ಲಿಯೇ ಇದ್ದಾರೆ. ನಾನು ಆದೇಶ ಕೊಡುತ್ತೇನೆ. ಲಕ್ಷ್ಮೀನಾರಾಯಣರವರೇ ನಮ್ಮ ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ ರಾಜರಾಜೇಶ್ವರಿ ದೇವಸ್ಥಾನದಿಂದ ಸಿರ್ಸಿ ಸರ್ಕಲ್‌ವರೆಗೆ ರೋಡ್ ಸಂಪೂರ್ಣವಾಗಿ ನಾಲ್ಕೈದು ವರ್ಷಗಳಿಂದ ಹಾಳಾಗಿದೆ. ನಾವು ಕಾರ್ಪೊರೇಷನ್‌ನಿಂದ ರಿಪೇರಿ ಮಾಡುವ ಕೆಲಸವನ್ನು ಆದಷ್ಟು ಬೇಗನೆ ಮಾಡಿಸಿ ಕೊಡುತ್ತೇನೆ.

ಯು.ಜಿ.ಡಿ ಹಾಗೂ ತ್ಯಾಜ್ಯ ನೀರು ಸಂಸ್ಕರಣ ಘಟಕ ನಿರ್ವಹಣೆ

86 (1919); ಶ್ರೀ ವಿನಯ್ ಕುಲಕರ್ಣಿ

ಅ) ಧಾರವಾಡ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ. 3, 6 ಮತ್ತು 7 ರಲ್ಲಿ ಯು.ಜಿ.ಡಿ ಸೌಲಭ್ಯ ಒದಗಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕ್ಷೇತ್ರದಲ್ಲಿ ಒಳಚರಂಡಿ ನಿರ್ಮಾನ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಈ ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ತೊಂದರೆ ಇದ್ದು, ಈ ತೊಂದರೆ ನಿವಾರಣೆ ಮಾಡಲು ಹಾಗೂ ನಿರಂತರವಾಗಿ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಸರ್ಕಾರ ಸೌಲಭ್ಯ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ: (ಮಾಹಿತಿ ನೀಡುವುದು)?

ಶ್ರೀ ವಿನಯಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು)

ಅ) ಬಂದಿದೆ.

ಆ) ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ

(ಎನ್.ಕೆ.ಯು.ಎಸ್.ಐ.ಪಿ) ದಡಿ ಧಾರವಾಡ ನಗರ ವ್ಯಾಪ್ತಿಯಲ್ಲಿ ರೂ. 50.43 ಕೋಟಿ ವೆಚ್ಚದಲ್ಲಿ ಯು.ಜಿ.ಡಿ ಹಾಗೂ ತ್ಯಾಜ್ಯ ನೀರು ಸಂಸ್ಕರಣ ಘಟಕದ ನಿರ್ಮಾಣ (2 ಪ್ಯಾಕೇಜ್) ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ.

ಧಾರವಾಡ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.6 ಮತ್ತು 7 ರಲ್ಲಿ (ಮುರುಘಾ ಮಠ, ರಾಜ ನಗರ, ಈಶ್ವರ್ ನಗರ, ಮಲ್ಲಿಕಾರ್ಜುನ ನಗರ, ಎಂ.ಆರ್ ನಗರ, ಗೊಲ್ಲರ ಓಣಿ, ಶಿವಾಜಿ ಸರ್ಕಲ್, ಹಜರತ್ ನಿಜಾಮುದ್ದೀನ್ ಕಾಲೋನಿ) ಯು.ಜಿ.ಡಿ ಕಾಮಗಾರಿಗಳಡಿ ಸುಮಾರು 9.00 ಕಿ.ಮಿ ಪೈಪ್ ಲೈನ್ ಅಳವಡಿಸಲಾಗುತ್ತಿದೆ.

ವಾರ್ಡ್ ಸಂ.6 ರಲ್ಲಿ 4.90 ಕಿ.ಮಿ ಪೈಪ್‌ಲೈನ್ ಅಳವಡಿಸಲಾಗಿದೆ. ಹಾಗೂ ವಾರ್ಡ್ ಸಂ.7 ರಲ್ಲಿ 3.90 ಕೀ.ಮಿ ಪೈಪ್‌ಲೈನ್ ಅಳವಡಿಸಲಾಗಿದ್ದು, ಬಾಕಿ 200.ಮೀ ಪೈಪ್‌ಲೈನ್ ಅಳವಡಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಈ ಎರಡು ವಾರ್ಡ್‌ಗಳಲ್ಲಿ ಅಂದಾಜು 3500 ಗೃಹಗಳಿಗೆ ಪ್ರಯೋಜನವಾಗಲಿದೆ.

ವಾರ್ಡ್ ನಂ.3 ಯೋಜನೆಯ ವ್ಯಾಪ್ತಿಯಲ್ಲಿರುವುದಿಲ್ಲ.

ಇ) ವಿಶ್ವ ಬ್ಯಾಂಕ್ ನೆರವಿನ "ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ" ಯಡಿಯಲ್ಲಿ ಈ ವಾರ್ಡುಗಳಿಗೆ ನಿರಂತರ (24/7) ಕುಡಿಯುವ ನೀರಿನ ಸೌಲಭ್ಯವನ್ನು ₹ 1809.00 ಕೋಟಿಗಳ ಅಂದಾಜು ಮೊತ್ತದಲ್ಲಿ ಒದಗಿಸಲು ಉದ್ದೇಶಿಸಿದೆ. (ಹುಬ್ಬಳ್ಳಿ–ಧಾರವಾಡ ಮಹಾನಗರದ ಅಂದಾಜು ₹ 763.00 ಕೋಟಿ).

ಮೇಲ್ಕಂಡ ಯೋಜನೆಯನ್ನು ಕಾರ್ಯಾಧಾರಿತ ನಿರ್ವಹಣಾ ಗುತ್ತಿಗೆ ಆಧಾರದ ಮೇಲೆ ಅನುಷ್ಠಾನಗೊಳಿಸಲು ಪ್ರಸ್ತಾವಿಸಿದೆ.

ವಿನ್ಯಾಸ ಮತ್ತು ಅನುಷ್ಠಾನ ಅವಧಿ : 4 ವರ್ಷಗಳು;

ನಿರ್ವಹಣಾ ಅವಧಿ : 8 ವರ್ಷಗಳು;

ಆಪರೇಟರ್‌ಗಳ ಆಯ್ಕೆಗಾಗಿ ಸ್ವೀಕೃತವಾಗಿದ್ದ ಪೂರ್ವಾರ್ಹತಾ ಅರ್ಜಿಗಳನ್ನು (RFQ) ಮೌಲ್ಯಮಾಪನ ಮಾಡಲಾಗಿದೆ. ಟೆಂಡರ್ ದಸ್ತಾವೇಜು (RFP) ಗಳನ್ನು ತಯಾರಿಸಲಾಗಿದ್ದು, ಸದ್ಯದಲ್ಲೇ ಪೂರ್ವಾರ್ಹತೆಗೊಂಡ ಆಪರೇಟರ್‌ಗಳಿಗೆ ನೀಡಲು ಯೋಜಿಸಲಾಗಿದೆ.

ಶ್ರೀ ವಿನಯ್ ಕುಲಕರ್ಣಿ:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ನನ್ನ ಕ್ಷೇತ್ರದಲ್ಲಿ ಒಳಚರಂಡಿ ಹಾಗೂ 24X7 ಕುಡಿಯುವ ನೀರಿನ ಯೋಜನೆ ಬಗ್ಗೆ ಕೇಳಿದ್ದೇನೆ. ನನ್ನ ಕ್ಷೇತ್ರದಲ್ಲಿ ಹಲವಾರು ಕಾಮಗಾರಿಗಳು ನಡೆದಿವೆ. ಈ ಕಾಮಗಾರಿಗಳು ಆಮೆ ವೇಗದಲ್ಲಿ ನಡೆಯುತ್ತಿವೆ. ಕಾಮಗಾರಿ ಪ್ರಾರಂಭವಾಗಿ ಎರಡು ವರ್ಷಗಳಾಗಿವೆ. Contractor ಕೂಡ ಒಂದು ಸಲ ಬಂದ ಅಂದರೆ ನಾಲ್ಕೈದು ತಿಂಗಳು ಇರುವುದಿಲ್ಲ. ನಾಲ್ಕೈದು ತಿಂಗಳು ಗ್ಯಾಪ್ ಕೊಡುತ್ತಾರೆ. ರಸ್ತೆಗಳೆಲ್ಲಾ ಸೆಂಟರ್ ರೋಡ್‌ನಲ್ಲಿ ಅಗೆದಿದ್ದಾರೆ. ರಸ್ತೆಗಳು ಎಲ್ಲ ಗುಂಡಿ ಬಿದ್ದಿವೆ. ಎರಡು ವರ್ಷ ಆಗಿರುವುದರಿಂದ ಆ ರಸ್ತೆಗಳ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಹುಬ್ಬಳ್ಳಿ ಧಾರವಾಡ ಎರಡೂ ಶಹರಗಳಲ್ಲಿಯೂ ಕೂಡ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿವೆ. ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದು ಇಷ್ಟೆ. ಇವತ್ತು ಧಾರವಾಡ ಶಹರದಲ್ಲಿ ಇನ್ನು ಹಲವಾರು ಕಡೆ ಒಳಚರಂಡಿ ಯೋಜನೆ ಆಗುವುದು ಅವಶ್ಯಕತೆ ಇದೆ. ಅವುಗಳನ್ನು ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ. ಬೇಸಿಗೆ ಪ್ರಾರಂಭವಾಗಿರುವುದರಿಂದ ಇಂತಹ ದೊಡ್ಡ ಶಹರದಲ್ಲಿಯೂ ಕೂಡ ಕುಡಿಯುವ ನೀರಿನ ಸಮಸ್ಯೆ ಪ್ರಾರಂಭವಾಗಿದೆ.

ಅಧ್ಯಕ್ಷರು:– ಒಂದೊಂದು ಪ್ರಶ್ನೆ ಕೇಳಿ. ನೀವು ಭಾಷಣ ಮಾಡಿದರೆ ಹೇಗೆ? ಮಾನ್ಯ ಸಚಿವರು ಏನು ಉತ್ತರ ಹೇಳುತ್ತೀರಿ ಹೇಳಿ ಬೇಗ.

ಶ್ರೀ ವಿನಯಕುಮಾರ್ ಸೊರಕೆ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ವಿಷ್ಯನ್ ಅಭಿವೃದ್ಧಿ ಬ್ಯಾಂಕ್‌ನ(ADB) ಮುಖಾಂತರ

ಸುಮಾರು 50.43 ಕೋಟಿ ರೂ. ಯೋಜನೆಯ UGD ಮತ್ತು STPಯ ಕಾಮಗಾರಿಯನ್ನು ಈಗಾಗಲೇ ನಡೆಸುತ್ತಿದ್ದೇವೆ. ಅದರಲ್ಲಿ ಧಾರವಾಡ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಾರ್ಡ್ 6 ಮತ್ತು 7 ರಲ್ಲಿ UGD ಕಾಮಗಾರಿ ಅಡಿಯಲ್ಲಿ ಸುಮಾರು 9 ಕಿ.ಮಿ. ಪೈಪ್‌ಲೈನ್ ಅಳವಡಿಸುವಂತಹ ಕೆಲಸವನ್ನು ಮಾಡಿದ್ದೇವೆ. ವಾರ್ಡ್ ನಂಬರ್ 6 ರಲ್ಲಿ 4.9 ಕಿ.ಮಿ. ನಲ್ಲಿ ಈಗಾಗಲೇ ಪೈಪ್‌ಲೈನ್ ಅಳವಡಿಸಿ ಆಗಿದೆ. ಅದೇ ರೀತಿಯಾಗಿ ವಾರ್ಡ್ ನಂಬರ್ 7 ರಲ್ಲಿ 3.9 ಕಿ.ಮಿ. ಪೈಪ್‌ಲೈನ್ ಅಳವಡಿಸಿದ್ದೇವೆ. 200 ಮೀಟರ್ ಪೈಪ್‌ಲೈನ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ. ಇದರಿಂದ ಎರಡು ವಾರ್ಡ್‌ಗಳಲ್ಲಿ ಸುಮಾರು 3500 ಗೃಹಗಳಿಗೆ ಪ್ರಯೋಜನವಾಗುವಂತಹ ಒಂದು ಕಾರ್ಯಕ್ರಮ. ವಾರ್ಡ್ ನಂ.3 ಮೂರು ಈ ಯೋಜನೆಯಲ್ಲಿ ಸೇರ್ಪಡೆಯಾಗಿರುವುದಿಲ್ಲ. ಮುಂದೆ ಅದನ್ನು ಸೇರ್ಪಡೆ ಮಾಡುವ ಕಾರ್ಯಕ್ರಮಕ್ಕೆ ನಾವು ಚಾಲನೆ ಕೊಡುತ್ತೇವೆ. ಕುಡಿಯುವ ನೀರಿನ ಬಗ್ಗೆ 24X7 ನೀರು ಸೌಲಭ್ಯ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒದಗಿಸುವುದಕ್ಕೆ 763 ಕೋಟಿ ರೂಪಾಯಿಯ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ. ಕಾರ್ಯಾಧಾರಿತ ನಿರ್ವಹಣಾ ಗುತ್ತಿಗೆ ಆಧಾರದಲ್ಲಿ ಈ ಯೋಜನೆ ಅನುಷ್ಠಾನಗೊಳ್ಳಲಿದ್ದು, ಯೋಜನೆಯ ಅನುಷ್ಠಾನದ ಅವಧಿ ನಾಲ್ಕು ವರ್ಷ ಮತ್ತು ನಿರ್ವಹಣೆಯ ಅವಧಿ ಎಂಟು ವರ್ಷ ಇದೆ. ಈ ಯೋಜನೆಯ ಟೆಂಡರ್ ಪ್ರಕ್ರಿಯೆ ಚಾಲನೆಯಲ್ಲಿದೆ. ಆದಷ್ಟು ಶೀಘ್ರವಾಗಿ ಮಾನ್ಯ ಶಾಸಕರು ಕೇಳಿರುವಂತಹ UGD ಬಗ್ಗೆ ಹಾಗೂ ಮೂರನೇ ವಾರ್ಡ್ ಅನ್ನು ಸೇರ್ಪಡೆ ಮಾಡುವ ಬಗ್ಗೆ ಮತ್ತು ಕುಡಿಯುವ ನೀರಿನ ಬಗ್ಗೆಯೂ ಕೂಡ ಮುಂದಿನ ಯೋಜನೆಯಲ್ಲಿ ಅಳವಡಿಸುವಂತಹ ಕಾರ್ಯಕ್ರಮವನ್ನು ಮಾಡುತ್ತೇವೆ.

ಶ್ರೀ ವಿನಯ್ ಕುಲಕರ್ಣಿ:– ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಕೆಲವು ಕಡೆ ಪೈಪ್‌ಲೈನ್ ಹಾಕುವ ಕೆಲಸ ಮುಗಿದಿದೆ. ಆದರೆ ಸಮಸ್ಯೆ ಏನಾಗಿದೆ ಎಂದರೆ, ರಸ್ತೆ ನಿರ್ಮಾಣ ಮಾಡುವುದೂ ಅವರಿಗೆ ಟೆಂಡರ್ ಕೊಟ್ಟಿದ್ದಾರೆ. Contractor ಮಾಡಿ ಹೋದಂತಹವನು ವಾಪಸ್ ಬಂದಿಲ್ಲ.

(ಈ ಹಂತದಲ್ಲಿ BJP ಶಾಸಕಾಂಗ ಪಕ್ಷದ ಶಾಸಕರು ಸಭಾತ್ಯಾಗವನ್ನು ಮುಕ್ತಾಯಗೊಳಿಸಿ ಪುನಃ ಸದನದೊಳಗೆ ಪ್ರವೇಶಿಸಿದರು)

ರಸ್ತೆ ನಿರ್ಮಾಣ ಮಾಡುವಂಥದ್ದನ್ನು ಅದರಲ್ಲಿಯೇ ಅವರಿಗೇ tender ಕೊಟ್ಟಿದ್ದಾರೆ. ಆದರೆ ಕಂಟ್ರ್ಯಾಕ್ಟರ್ ಕೆಲಸ ಮಾಡಿ ವಾಪಸ್ ಹೊರಟು ಹೋಗಿ ಮತ್ತೆ ಬಂದಿಲ್ಲ. ರಸ್ತೆಗಳು ಸಂಪೂರ್ಣವಾಗಿ ಹಾಳಾಗಿದೆ. ಪಿ.ಡಬ್ಲ್ಯೂಡಿಯವರನ್ನು ಕೇಳಿದರೆ ಅವರೇ ಮಾಡಿಕೊಡಬೇಕು ಎನ್ನುತ್ತಾರೆ. ಕಾರ್ಪೊರೇಷನ್‌ನವರನ್ನು ಕೇಳಿದರೆ ಅವರೇ ಮಾಡಿಕೊಡಬೇಕು ಎಂದು ಹೇಳುತ್ತಾರೆ. ಆದುದರಿಂದ ಮಾನ್ಯ ಸಚಿವರು ಈ ವಿಷಯವನ್ನು ಗಮನದಲ್ಲಿ ತೆಗೆದುಕೊಂಡು ಮನಸ್ಸು ಮಾಡಿ ಈ ಕೆಲಸವನ್ನು ಮಾಡಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿನಯಕುಮಾರ್ ಸೊರಕೆ:– Pipeline restore ಮಾಡುವಂಥ ಕೆಲಸ ಕಾರ್ಯ, pipeline, ಆ ಕೆಲಸ ಪೂರ್ಣವಾದ ಕೂಡಲೇ restore ಮಾಡತಕ್ಕ ಕೆಲಸ ಕಾರ್ಯಕ್ಕೆ ಆ ವ್ಯಾಪ್ತಿಯಲ್ಲಿ ಕೂಡಲೇ ಮಾಡುವಂಥ ರೀತಿಯಲ್ಲಿ ನಾವು ಈಗಲೇ ಸೂಚನೆಯನ್ನು ಕೊಡುತ್ತೇವೆ.

ಅಧ್ಯಕ್ಷರು:– O.K., next ಯಶವಂತರಾಯ ವಿಠಲಗೌಡ, ಅವರು ಇಲ್ಲ, next ಎಸ್.ಟಿ. ಸೋಮಶೇಖರ್.

ಕೊಳವೆ ಬಾವಿಗಳನ್ನು ಕೊರೆಯಿಸುವ ಬಗ್ಗೆ

(1587); ಶ್ರೀ ಸೋಮಶೇಖರ್ ಎಸ್.ಟಿ. (ಯಶವಂತಪುರ)

ಅ) 2013 ರಿಂದ ಇಲ್ಲಿಯವರೆಗೆ ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನೀರು ಸರಬರಾಜು ಮಾಡದ ಪ್ರದೇಶಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಕೊರೆದಿರುವ ಕೊಳವೆ ಬಾವಿಗಳೆಷ್ಟು; (ವಿವರ ನೀಡುವುದು)

ಆ) ಈ ಕ್ಷೇತ್ರಕ್ಕೆ ನೀರು ಪೂರೈಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;